International Journal of Kannada Research
www.kannadajournal.com

ISSN: 2454-5813
IJKR 2022; 8(3): 83-87
© 2022 IJKR
www.kannadajournal.com
Received: 01-06-2022
Accepted: 03-07-2022

**ಡಾ. ಹೆಚ್.ಎಂ.ಮೋಹನ**
ಮೈಸೂರು ವಿಶ್ವವಿದ್ಯಾನಿಲಯ ಕ್ವಾಟ್ರರ್ಸ್, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಹೆಚ್.ಎಂ.ಮೋಹನ**
ಮೈಸೂರು ವಿಶ್ವವಿದ್ಯಾನಿಲಯ ಕ್ವಾಟ್ರರ್ಸ್, ಮೈಸೂರು, ಕರ್ನಾಟಕ, ಭಾರತ

# ನೀರಾವರಿ ಕ್ಷೇತ್ರಕ್ಕೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಕೊಡುಗೆ

**ಡಾ. ಹೆಚ್.ಎಂ.ಮೋಹನ**

ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಒಡೆಯರಲ್ಲಿಯೇ ಜನಪರ ಹಾಗೂ ಸಮಾಜಪರವಾಗಿಯೇ ತಮ್ಮ ಬದುಕಿನ ಉದ್ದಕ್ಕೂ ತತ್ತ್ವಜ್ಞಾನಿ ಅರಸರಾಗಿಯೇ ತುಡಿದವರು. ರಾಜ – ಮಹಾರಾಜರ ಆಡಳಿತದ ಚರಿತ್ರೆಯನ್ನು ಒಂದು ಬಾರಿ ಸಿಂಹಾವಲೋಕನ ಮಾಡಿದಾಗ; ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅತ್ಯಂತ ಕಿರಿಯ ವಯಸ್ಸಿಗೆ ಮೈಸೂರು ಸಂಸ್ಥಾನದ ಸಿಂಹಾಸನವನ್ನು ಏರಿದ ಅರಸರು. ಮತ್ತೇ ರಾಜಕೀಯ ವಿಜ್ಞಾನಿಗಳು ಹೇಳಿರುವಂತೆಯೇ ತತ್ತ್ವಜ್ಞಾನಿ ಅರಸರಾಗಿ ಕಾರ್ಯಪ್ರವೃತ್ತರಾಗಿದ್ದವರಲ್ಲಿ ಇವರು ಕೂಡ ಪ್ರಮುಖರು. ಒಂದು ವೈಶಿಷ್ಟ್ಯವೆಂದರೆ; ಇವರು ಚಾಮರಾಜ ಒಡೆಯರ್ ಅವರು ಮೈಸೂರು ನಗರದಲ್ಲಿ ಆರಂಭಿಸಿದ್ದ ರಾಯಲ್ ಶಾಲೆಯ ಶಿಕ್ಷಕರಾದಂಥ ಎಸ್.ಎಂ.ಫ್ರೇಜ಼ರ್ ಅವರ ಮೆಚ್ಚಿನ ವಿದ್ಯಾರ್ಥಿಯಾಗಿದ್ದವರು. ಮತ್ತೇ ದೇಶದಲ್ಲಿನ ಮತ್ತೊಂದು ಸಂಸ್ಥಾನವಾದ ಕೊಲ್ಲಾಪುರದಲ್ಲಿ ಛತ್ರಪತಿ ಶಾಹು ಮಹಾರಾಜರೂ ಕೂಡ ಇವರ ಶಿಷ್ಯರೇ ಆಗಿದ್ದವರು. ಈ ಗುರುವಿನಿಂದ ಪಾಠ, ಪ್ರವಚನ, ಶಿಸ್ತು, ಜನಪರ ಗುಣಗಳನ್ನು ರೂಢಿಸಿ ಅದನ್ನೇ ತಾವು ಅಧಿಕಾರಕ್ಕೆ ಬಂದಾಗ ಅನುಷ್ಠಾನಕ್ಕೆ ತಂದವರು. ಇವರಿಬ್ಬರು ಮಹಾರಾಜರೂ ಎಂಬುದು ಇಂದು ಚರಿತ್ರೆಯ ಪುಟಗಳಲ್ಲಿ ದಾಖಲಿಸಲಾಗಿದೆ.

ಮೈಸೂರು ಪ್ರಾಂತ್ಯವನ್ನು ಆಳಿದವರಲ್ಲಿ ಹೆಚ್ಚು ಜನಪ್ರಿಯ ಮತ್ತು ಜನಪರವಾದಂಥ ಕೆಲಸಗಳನ್ನು ಕೈಗೊಂಡವರು ಮೈಸೂರು ಒಡೆಯರು ಎಂದು ಹೇಳಬಹುದು. ಮೈಸೂರು ಒಡೆಯರ ಆಳ್ವಿಕೆಯಲ್ಲಿ ಹಿಂದೆಂದು ಕಾಣದ ಅಭಿವೃದ್ಧಿ, ಜನಸ್ನೇಹಿ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬಂದಿರುವುದನ್ನು ಗುರುತಿಸಬಹುದು. ನೆಲಕ್ಕೆ ಕೃತಕವಾಗಿ ನೀರಿನ ಅನ್ವಯ, ಮುಖ್ಯವಾಗಿ ಬೇಸಾಯಕ್ಕೆ ಮಳೆ, ನೀರನ್ನು ಮಾತ್ರ ಆಶ್ರಯಸದೇ ಇತರ ನೈಸರ್ಗಿಕ ಮೂಲಗಳಿಂದ ಅಂದರೆ; ನದಿ, ಸರೋವರ, ತೋಡುಬಾವಿಗಳಿಂದ ನೀರನ್ನು ಒದಗಿಸುವುದನ್ನು ನೀರಾವರಿ ಎಂದು ಕರೆಯಲಾಗುತ್ತದೆ. ಮತ್ತೇ ಇಂಥ ಬಳಕೆಯನ್ನು ನೀರಾವರಿಯ ಉದ್ದೇಶವೇ ಆಗಿರುತ್ತದೆ. ಆದ್ದರಿಂದ ಈ ತೆರನಾಗಿ ಒದಗಿ ಬರುವ ನೀರಿನ ಮೂಲ ಅಥವಾ ಜಲಾಶಯ ಮತ್ತು ಸಂಗ್ರಹಿತ ಜಲವನ್ನು ಉದಿಷ್ಟ ಭೂಮಿಗೆ ಹರಿಸಲು ಕಾಲುವೆಗಳು ಅಗತ್ಯವಾಗಿರುತ್ತವೆ. ಹಾಗಾಗಿಯೇ ಇವುಗಳನ್ನು ನೀರಾವರಿಯ ಪ್ರಮುಖ ಅವಶ್ಯಕತೆಗಳು ಎಂದು ಹೇಳಲಾಗುತ್ತದೆ. ಪರಿಸರದಲ್ಲಿ ನೈಸರ್ಗಿಕವಾಗಿ ಸೃಷ್ಟಿಗೊಂಡಿರುವ ಬೆಟ್ಟ–ಗುಡ್ಡ–ಕಣಿವೆ–ನದಿಗಳು, ಹೊಳೆಗಳು ಹಾಗೂ ಹಳ್ಳ – ಕೊಳ್ಳಗಳಿಂದ ಮಳೆಯ ಕಾರಣಕ್ಕಾಗಿ ಸಾಕಷ್ಟು ನೀರು ಹರಿದು ಸಮುದ್ರವನ್ನು ಅಂತಿಮವಾಗಿ ಸೇರುತ್ತದೆ. ಅಂಥ ಸಂದರ್ಭದಲ್ಲಿ ತಗ್ಗು ಪ್ರದೇಶಗಳಲ್ಲಿ ಕಟ್ಟೆಗಳು ಹಾಗೂ ಅಣೆಕಟ್ಟುಗಳು ನಿರ್ಮಾಣ ಮಾಡುವುದು ಜಗತ್ತಿನ ಚರಿತ್ರೆಯಲ್ಲಿಯೇ ಗುರುತಿಸಬಹುದು. ಅಂದರೆ, ನೈಲ್ ನದಿಗೆ ಅಣೆಕಟ್ಟು ಕಟ್ಟಿ ಅಲ್ಲಿನ ಜನರಿಗೆ ಜಲಧಾರಿಯನ್ನು ಹರಿಸಿರುವುದು ಚರಿತ್ರೆಯನ್ನು ಸೃಷ್ಟಿಸಿದೆ. ಇದನ್ನು ಮಾದರಿಯಾಗಿಯೇ ಅನುಸರಿಸಿ ಜಗತ್ತಿನದಾದ್ಯಂತ ಹಲವು ಹತ್ತು ಅಣೆಕಟ್ಟುಗಳು ನಿರ್ಮಾಣಗೊಂಡು ಬರಡು ಬದುಕಿಗೆ ಜಲಧಾರಿಯನ್ನು ಉಣಿಸಲಾಗಿದೆ.

ಮೈಸೂರು ರಾಜ್ಯದ ಸರ್ವ ರೀತಿಯಲ್ಲಿನ ಪ್ರಗತಿಗೆ ಅದರಲ್ಲೂ ಬಹುಮುಖ್ಯವಾಗಿ ಕೃಷಿ ಮತ್ತು ಕೈಗಾರಿಕೆಗಳ ಬೆಳವಣಿಗೆ ಮತ್ತು ಅಭಿವೃದ್ಧಿಯೂ ಕೂಡ ಅತ್ಯಾವಶ್ಯಕವೆಂಬುದನ್ನು ಬಹುಸೂಕ್ಷ್ಮವಾಗಿ ಅರಿತಿದ್ದಂಥ ಮೈಸೂರು ರಾಜ್ಯದ ಜನಪ್ರಿಯ ಮಹಾರಾಜರು ಇದಕ್ಕೆ ಪೂರಕವಾಗಿರುವಂಥ ಹಲವು ಹತ್ತು ಕಾರ್ಯಯೋಜನೆಗಳನ್ನು ರೂಪಿಸಿರುತ್ತಾರೆ. ಅದರ ಒಂದು ಭಾಗವೇ ನೀರಾವರಿ ಯೋಜನೆಗಳ ಅನುಷ್ಠಾನವೆಂದರೆ ಬಹುಶಃ ತಪ್ಪಾಗಲಾರದು. ಆದ್ದರಿಂದಲೇ ನೀರಾವರಿಗೂ ಪ್ರಾಧ್ಯಾನ್ಯತೆಯನ್ನು ಕೊಡುವ ಮುಖೇನ ಬರಡು ಜೀವನಕ್ಕೆ ಜಲಧಾರೆಯನ್ನು ನೀಡಿದರು.

ಪ್ರಜೆಗಳ ಸರ್ವಹಿತಕ್ಕಾಗಿ, ಮೈಸೂರು ಸಂಸ್ಥಾನದ ಪ್ರಗತಿಗಾಗಿ ನೀರಾವರಿಯ ಕಾರ್ಯಚಟುವಟಿಕೆಗಳ ನಿರ್ವಹಣೆಗಾಗಿ ಸಮರ್ಥವಾದಂಥ ತಜ್ಞ ದಿವಾನರುಗಳನ್ನು ಹಾಗೂ ದಕ್ಷ ಪ್ರಾಮಾಣಿಕ ಅಧಿಕಾರಿ ವರ್ಗವೊಂದನ್ನು ನೇಮಿಸಲಾಗಿರುತ್ತದೆ. ಹೀಗೆ ನೇಮಿಸಿ ಅವರ ಕ್ರಿಯಾಶೀಲ ಯೋಜನೆಗಳು ಮತ್ತು ಅವುಗಳ ಅನುಷ್ಠಾನದ ಪ್ರತಿಹಂತದಲ್ಲೂ ಅಗತ್ಯ ಸಲಹೆ ಸಹಕಾರಗಳನ್ನು ನೀಡುವ ಮುಖೇನ ಸಂಸ್ಥಾನದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡರು. ಅವುಗಳನ್ನು ಈ ಮುಂದಿನಂತೆ ಕಾಲಾನುಕ್ರಮದಲ್ಲಿ ಅನುಷ್ಠಾನಕ್ಕೆ ಬಂದುರುವ ಯೋಜನೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಕಾಲುವೆಗಳು ಹಾಗೂ ಕೆರೆ-ಕಟ್ಟೆಗಳನ್ನು ದುರಸ್ಥಿಗೊಳಿಸಿದ್ದರು. ಅದರೊಂದಿಗೆ ಅನೇಕ ಹೊಸ ಅಣೆಕಟ್ಟುಗಳನ್ನು ನಿರ್ಮಾಣದ ಕಾರ್ಯವೂ ಕೂಡ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿರುವುದನ್ನು ಗುರುತಿಸಬಹುದು. ಈ ಕಾಲಾವಧಿಯಲ್ಲಿ ವಿಸ್ತರಣಗೊಂಡಂಥ ಪ್ರಧಾನವಾದ ಕಾಲುವೆಗಳು ಯಾವುದೆಂದರೆ; ಹೇಮಗಿರಿ ಕಾಲುವೆ, ಮಂದಗೆರೆ ಕಾಲುವೆ, ಚಾಮರಾಜ ಅಣೆಕಟ್ಟೆಯ ಬಲದಂಡೆ ಕಾಲುವೆ, ಹೇಮಾವತಿ ನದಿಯ ಶ್ರೀರಾಮ ದೇವರ ಅಣೆಕಟ್ಟೆಯ ದಕ್ಷಿಣನಾಲೆ, ವಿಠಲಪುರದ ತೊರೆಯ ಮೇಲು ಕಾಲುವೆ, ಕಾವೇರಿ ನದಿಯ ಕೃಷ್ಣರಾಜ ಕಟ್ಟೆ ನಾಲೆಗಳು. ಈ ಅವಧಿಯಲ್ಲಿಯೇ ಕೇತೋಹಳ್ಳಿ ಕೆರೆ, ಮರಳವಾಡಿ ಕೆರೆ, ಹೈರಿಗೆ ಕೆರೆ, ತುಂಬಾಡಿಕೆರೆ, ದಳವಾಯಿ ಕೆರೆ, ಕಾಮಸಮುದ್ರ ಕೆರೆಗಳನ್ನು ಹೊಸದಾಗಿ ನಿರ್ಮಿಸಿ ಆ ಮುಖೇನ ಸ್ಥಳೀಯ ಮಟ್ಟದಲ್ಲಿ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ.

ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀರಾವರಿ ಸೌಕರ್ಯ ಹಾಗೂ ಸವಲತ್ತಿಗಾಗಿ ಬರಿ ಸಣ್ಣ ಪುಟ್ಟ ಕೆರೆ-ಕಟ್ಟೆಗಳನ್ನು ಮಾತ್ರ ನಿರ್ಮಿಸಿಲ್ಲ. ಅದರಿಂದಾಚೆಗೂ ಬೃಹತ್ ಹಾಗೂ ಶಾಶ್ವತವಾದ ನೀರಾವರಿ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಅನುಷ್ಠಾನಕ್ಕೂ ಕೂಡ ತಂದಿರುತ್ತಾರೆ. ಅದು 20ನೇ ಶತಮಾನದಲ್ಲಿ ಅಭಿವೃದ್ಧಿಯ ಜ್ಯೋತಕವೇ ಆಗಿರುತ್ತದೆ. 1912ರ ಕಾಲಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗಿರುವ ಕಾರಣವಾಗಿಯೇ ಕಾವೇರಿ ನದಿಯಲ್ಲಿ ಬಂದಂಥ ಪ್ರವಾಹದಿಂದಾಗಿಯೇ ಮಾಧವಮಂತ್ರಿ ಅಣೆಕಟ್ಟೆಯ 280 ಅಡಿಗಳ ಉದ್ದವಿದ್ದಂಥ ಏರಿಯೂ ಒಡೆದು ಹೋಗಿರುತ್ತದೆ. ಅದನ್ನು ಮತ್ತು ದುರಸ್ಥಿ ಮಾಡಲಾಗಿರುತ್ತದೆ. ಇದೇ ಕಾಲಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಹಲಸೂರು ಬಳಿಯ ಭೃಗು ನದಿಗೆ ಅಡ್ಡಲಾಗಿ ಅಣೆಕಟ್ಟೆಯನ್ನು ನಿರ್ಮಿಸಲಾಗಿರುತ್ತದೆ. 1918ರಲ್ಲಿ ಶಿವಮೊಗ್ಗ ಜಿಲ್ಲೆಯ ಗೋಪಾಲದ ಬಳಿ ಭದ್ರಾ ನದಿಗೆ ಅಣೆಕಟ್ಟೆಯ ನಿರ್ಮಾಣ ಆರಂಭವಾಗಿರುತ್ತದೆ. ಈ ಎಲ್ಲಾ ನೀರಾವರಿಗೆ ಸಂಬಂಧಿಸಿದಂಥ ಕಾಮಗಾರಿಗಳು ಒಂದು ಮಾದರಿಯಲ್ಲಿ ಜೀವ ಜಲಧಾರೆಯನ್ನು ಕಲ್ಪಿಸಿ ಜೀವ ಮತ್ತು ಜೀವನವನ್ನು ಕಟ್ಟಿಕೊಂಡು ಬದುಕಲು ಆಶ್ರಯವೇ ಆಗಿರುತ್ತದೆ. ಇಂಥ ಲೋಕೋಪಯೋಗಿ ಕಾಮಗಾರಿಗಳಿಗೆ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಂಸ್ಥಾನದ ರಾಜಸ್ವ ನಿಧಿಯಿಂದ ಲಕ್ಷ ಲಕ್ಷಗಟ್ಟಲೇ ರೂಪಾಯಿಗಳನ್ನು ಲೆಕ್ಕವಿಲ್ಲದಷ್ಟು ವೆಚ್ಚ ಮಾಡಿದ್ದಾರೆ. ಇದು ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನಪರ ಕಾಳಜಿಯ ಪ್ರತಿಬಿಂಬವೇ ಆಗಿರುತ್ತದೆ. ಏಕೆಂದರೆ, ಆಗಿನ ಕಾಲದಲ್ಲಿ ರಾಜ ಮಹಾರಾಜರೆಂದರೆ; ಯುದ್ಧ, ದಂಡೆತ್ತಿ ಹೋಗಿ ಇತರ ರಾಜರುಗಳನ್ನು ಸೋಲಿಸಿ ಅವರನ್ನು ಸಂಹರಿಸಿ ರಾಜ್ಯ ಹಾಗೂ ಅಲ್ಲಿನ ಸರ್ವಸಂಪತ್ತನ್ನು ಲೂಟಿಹೊಡೆದು ಬರುವುದೇ ಆಗುತ್ತಿತ್ತು. ಆದರೆ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇದರಿಂದ ಬಹುದೂರ ಸಾಗಿ ಸ್ವತಃ ರಾಜನಿಧಿಯಿಂದಲೇ ಸಮಾಜಪರ ಕೆಲಸಗಳಿಗೆ ಹಣವನ್ನು ವೆಚ್ಚ ಮಾಡುತ್ತಿದ್ದರು. ಇದು ಮಹಾರಾಜರಲ್ಲಿ ಇದ್ದಂಥ ನೈತಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಹಿಡಿದ ಕನ್ನಡಿಯೇ ಆಗಿರುತ್ತದೆ.

20ನೇ ಶತಮಾನದ ಭಾರತದ ಸಂದರ್ಭದಲ್ಲಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಒಂದು ಸುವರ್ಣ ಯುಗವೇ ಆರಂಭಗೊಂಡಿರುತ್ತದೆ. ಏಕೆಂದರೆ, ಬ್ರಿಟಿಷ್ ಪ್ರಭುತ್ವದ ಭಾರತೀಯ ರಾಷ್ಟ್ರ ಸರ್ಕಾರವೇ 1901ರಲ್ಲಿ ಪ್ರಥಮ ನೀರಾವರಿ ಆಯೋಗವನ್ನು ರಚಿಸಿರುತ್ತದೆ. ಈ ಆಯೋಗವು ಇಡೀ ಬ್ರಿಟಿಷ್ ಭಾರತವನ್ನು ಸಂಚರಿಸಿ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಒಂದು ವಿಸ್ತೃತವಾದಂಥ ವರದಿಯನ್ನು ತಯಾರಿಸಿ ನೀಡುವುದೇ ಆಗಿತ್ತು. ಹಾಗಾಗಿಯೇ ಈ ನೀರಾವರಿ ಆಯೋಗವು ರಾಷ್ಟ್ರದಲ್ಲಿನ ನೀರಾವರಿಗೆ ಅಗತ್ಯವಿರುವಂಥ ಸುಸ್ಥಿರ ಮತ್ತು ಸುಭದ್ರ ಹಾಗೆಯೇ ಸೂಕ್ತವಾದ ಕಾರ್ಯಕ್ರಮಗಳು ಮತ್ತು ಅವುಗಳನ್ನು ಪಾಲಿಸಬೇಕಾದ ತತ್ತ್ವಗಳನ್ನು ಒಳಗೊಂಡ ಅತೀ ಉಪಯುಕ್ತವಾಗಿತ್ತು. ಇದೇ ಕಾಲಸಂದರ್ಭದಲ್ಲಿ ಮೈಸೂರು ರಾಜ ಸಂಸ್ಥಾನದಲ್ಲಿ ಆಗಾಗ್ಗೆ ಮರುಕಳಿಸಿದ ತೀವ್ರತರವಾದ ಬರಗಾಲವೂ ಕೂಡ ಹಲವು ಹತ್ತು ನೀರಾವರಿ ಯೋಜನೆಗಳಿಗೆ ಹಾಗೂ ಜಲಾಶಯಗಳ ಅವಶ್ಯಕತೆ ಅವುಗಳ ನಿರ್ಮಾಣಕ್ಕೆ ಒಂದು ಮಾದರಿಯಲ್ಲಿ ಪುಷ್ಟಿಯನ್ನೇ ನೀಡಿದಂತಾಗಿರುತ್ತದೆ.

ಇದೇ ಶತಮಾನದ ಪೂರ್ವಾರ್ಧದಲ್ಲಿ ಮೈಸೂರು ಪ್ರಾಂತ್ಯದಲ್ಲಿ ನೀರಾವರಿ ಯೋಜನೆಗಳು ಆರಂಭಗೊಂಡಿರುತ್ತವೆ. ಮತ್ತೇ ಎರಡನೇ ಜಾಗತಿಕ ಮಹಾಯುದ್ಧದ ಅನಂತರ ಬ್ರಿಟಿಷ್ ಭಾರತದ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಆಶಾದಾಯಕವೇ ಆಗಿರಲಿಲ್ಲ. ಆ ಪರಿಸ್ಥಿತಿಯನ್ನು ಪುನಶ್ಚೇತನಗೊಳಿಸಲು ಹಾಗೂ ಕೃಷಿ ಉತ್ಪಾದನೆಯನ್ನು ವೃತ್ತಿಗೊಳಿಸುವ ಸಲುವಾಗಿ ಜನಪರ ಹಾಗೂ ಜನಸ್ನೇಹಿಯಾದಂಥ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಾಡಿನ ಸರ್ವಜನರ ಬದುಕನ್ನು ಹಸನುಗೊಳಿಸುವ ಸಲುವಾಗಿಯೇ ವೇದಾವತಿ ನದಿಗೆ ಅಡ್ಡಲಾಗಿ ವಾಣಿವಿಲಾಸ ಸಾಗರ (ಮಾರಿಕಣಿವೆ) ಮತ್ತು ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜ ಸಾಗರ ಜಲಾಶಯ ಯೋಜನೆಗಳನ್ನು ಆರಂಭಿಸಿದ್ದರು.

ವಾಣಿವಿಲಾಸ ಮಾರಿಕಣಿವೆ ಅಣೆಕಟ್ಟು ಕನ್ನಡ ನಾಡಿನ ಅತ್ಯಂತ ಹಳೆಯ ಅಣೆಕಟ್ಟುಗಳಲ್ಲಿ ಒಂದಾಗಿದೆ. ಈ ಅಣೆಕಟ್ಟೆಯನ್ನು ಹಿರಿಯೂರು, ತಾಲ್ಲೂಕಿನ ವಾಣಿವಿಲಾಸಪುರ ಹತ್ತಿರ ವೇದಾವತಿ ನದಿಗೆ ಅಡ್ಡಲಾಗಿ ಮಾರಿಕಣಿವೆ ಎಂಬ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗಿದೆ. ಇದರ ನಿರ್ಮಾಣದ ಕಾರ್ಯವೂ 1897ರಲ್ಲಿ ಆರಂಭಗೊಂಡು ಹತ್ತು ವರ್ಷಗಳಲ್ಲಿ ಪೂರ್ಣಗೊಂಡಿರುತ್ತದೆ ಎಂಬ ಮಾಹಿತಿಯೂ ಲಭ್ಯವಾಗಿರುತ್ತದೆ. ಇದರ ನಿರ್ಮಾಣಕ್ಕೆ ಸರಿಸುಮಾರು 45 ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ. ಈ ಮಾರಿಕಣಿವೆ ವಾಣಿವಿಲಾಸ ಅಣೆಕಟ್ಟೆಯೂ ಹಿರಿಯೂರಿನಿಂದ ಸರಿಸುಮಾರು 20 ಕಿ.ಮೀಗಳಷ್ಟು ದೂರದಲ್ಲಿದೆ. ಇದರ ಎತ್ತರವೂ 50 ಮೀಟರ್, ಉದ್ದ 405 ಮೀಟರ್‌ಗಳು ಹಾಗೂ 135 ಅಡಿಗಳವರೆಗೆ ನೀರನ್ನು ಸಂಗ್ರಹಿಸುವಂಥ ಸಾಮರ್ಥ್ಯವನ್ನು ಈ ಮಾರಕಣಿವೆ ಅಣೆಕಟ್ಟೆಯೂ ಹೊಂದಿದೆ. ಹಿರಿಯೂರು ತಾಲ್ಲೂಕಿನ ಸುಮಾರು 1/3ರಷ್ಟು ಅಂದರೆ; ಸುಮಾರು 10,000 ಹೆಕ್ಟೇರ್ ಭೂ ಪ್ರದೇಶಕ್ಕೆ ನೀರುಣಿಸುವುದು. ಇದೇ ಅಲ್ಲದೇ ಈ ಅಣೆಕಟ್ಟಿನಿಂದ ಹಿರಿಯೂರು ಮತ್ತು ಚಿತ್ರದುರ್ಗ ನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಕೂಡ ಒದಗಿಸುತ್ತದೆ. ಮತ್ತೇ ಈ ಅಣೆಕಟ್ಟಿನ ಒಂದು ವಿಶೇಷತೆಯೆಂದರೆ; ಯಾವುದೇ ಸಿಮೆಂಟಿನ ಉಪಯೋಗವಿಲ್ಲದೆ ಬರೀ ಸುಣ್ಣದ ಗಾರೆಯಿಂದಲೇ ಇದನ್ನು ನಿರ್ಮಾಣ ಮಾಡಲಾಗಿದೆ. ಈ ಅಣೆಕಟ್ಟೆಯ ಒಂದು ಬದಿಯಿಂದ ನೋಡಿದಾಗ; ಭಾರತದ ಭೂಪಟವನ್ನು ನಾವು ಕಾಣಬಹುದಾಗಿದೆ. ಇದು ಹಿರಿಯೂರು

ಮತ್ತು ಬಲ–ಎಡ ದಂಡೆ ಕಾಲುವೆಗಳ ಮೂಲಕ ಚಳ್ಳಕೆರೆ ತಾಲ್ಲೂಕಿನಲ್ಲಿ 100ಕ್ಕಿಂತಲೂ ಹೆಚ್ಚು ಚದರ ಕಿಲೋಮೀಟರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಮತ್ತೇ ರಾಜಮಾತೆ ಯಾಗಿದ್ದಂಥ ವಾಣಿವಿಲಾಸ ಸನ್ನಿಧಾನವು ಅಂದರೆ; ಹತ್ತನೇ ಚಾಮರಾಜ ಒಡೆಯರ್ ಅವರು ಮರಣ ಹೊಂದಿದ ಅನಂತರ ಮೈಸೂರು ರಾಜ್ಯದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿದ್ದರು ಇವರೇ ಎಂದು ಹೇಳಬಹುದು. ಇವರು ಈ ಅಣೆಕಟ್ಟೆಯ ನಿರ್ಮಾಣದ ಕಾರ್ಯಕ್ಕೆ ಹಣಕಾಸಿನ ಕೊರತೆ ಒದಗಿಬಂದಾಗ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ರಾಜಮನೆತನದ ಆಭರಣಗಳನ್ನು ಕೊಟ್ಟು ಇದನ್ನು ಪೂರ್ಣಗೊಳಿಸಲು ಆಜ್ಞೆಯನ್ನು ನೀಡಿದವರು. ಅದಕ್ಕಾಗಿ ಈ ಅಣೆಕಟ್ಟಿಗೆ ಮಾತೃಪ್ರೇಮವನ್ನು ಶಾಶ್ವತವಾಗಿ ಸಾಕ್ಷೀಕರಿಸಿದ ಮಹಾರಾಜ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ವಾಣಿ ವಿಲಾಸ ಸಾಗರ ಅಥವಾ ಜಲಾಶಯವೆಂದು ನಾಮಕರಣ ಮಾಡಿದರು. ಈ ಜಲಾಶಯವೂ ಕೂಡ ಕೆ.ಆರ್.ಎಸ್. ಜಲಾಶಯದ ಮಾದರಿಯಲ್ಲಿಯೇ ಪ್ರವಾಸಿ ತಾಣವೇ ಆಗಿದೆ. ಇತ್ತೀಚೆಗೆ ಅರಣ್ಯ ಇಲಾಖೆಯವರು ಪಂಚವತಿ ತೋಟಗಳನ್ನು ಪುನಃ ಸ್ಥಾಪಿಸಿ ಅದನ್ನು ಅಭಿವೃದ್ಧಿ ಪಡಿಸಿದ್ದಾರೆ. ಇಲ್ಲಿ ಹಳೆಯ ಭಾರತೀಯ ಸಾಂಸ್ಕೃತಿಕ ಪರಂಪರೆಯ ಔಷಧಿ ಸಸ್ಯಗಳ ಉದ್ಯಾನವು ಪ್ರವಾಸಿಗರಿಗೆ ಮೆಚ್ಚುಗೆಯೇ ಆಗಿರುತ್ತದೆ. ಇದು ವಾರಾಂತ್ಯದ ಪ್ರವಾಸಿಗರಿಗೆ ಸುಂದವಾದ ಪರಿಸರವನ್ನು ನೀಡುತ್ತಿದೆ.

ಕೃಷ್ಣರಾಜ ಸಾಗರ ಜಲಾಶಯ ನೀರಾವರಿ ಯೋಜನೆಯೂ ಒಂದು ಚರಿತ್ರೆಯನ್ನು ಭಾರತದ ಭವ್ಯ ಚರಿತ್ರೆಯಲ್ಲಿ ಬರೆದಿರುತ್ತದೆ. ಏಕೆಂದರೆ, ಇಂಥದ್ದೊಂದು ಬೃಹತ್ ಪ್ರಮಾಣದ ಅಣೆಕಟ್ಟು ದೇಶದಲ್ಲಿಯೇ ಇಲ್ಲಿಯವರೆವಿಗೂ ನಿರ್ಮಾಣಗೊಂಡಿರುವುದಿಲ್ಲ. ಮತ್ತೇ ಮಾನವೀಯ ಅಂತಃಕರಣವುಳ್ಳಂಥ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನಸ್ಸಿನ ಮಹತ್ವದ ಯೋಜನೆಗಳಲ್ಲಿ ಇದು ಪ್ರಧಾನವಾಗಿದೆ. ಈ ಜಲಾಶಯ ನಿರ್ಮಾಣದ ಪೂರ್ವಭಾವಿ ತಯಾರಿಯ ಚರಿತ್ರೆಯನ್ನು ಗ್ರಹಿಸುವುದಾದರೆ; 1906ರಲ್ಲಿ ಈ ಅಣೆಕಟ್ಟೆಯ ನಿರ್ಮಾಣಕ್ಕೆ ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಯೋಜನೆಯೊಂದನ್ನು ರೂಪಿಸಿದ್ದರು. ಆ ಕಾರಣವಾಗಿಯೇ ಅದೇ ವರ್ಷ ಕಾಮಗಾರಿಯೂ ಆರಂಭಗೊಂಡಿರುತ್ತದೆ. ಹೀಗೆ, ಆರಂಭಗೊಂಡಿರುವ ಅಣೆಕಟ್ಟೆಯ ಕಾಮಗಾರಿ ಪೂರ್ಣಗೊಂಡಿದ್ದು ಮಾತ್ರ 1932ರಲ್ಲಿ ಎಂದು ಹೇಳಬಹುದು. ಇದರ ನಿರ್ಮಾಣದ ಕಾರ್ಯವೂ ಸರಿಸುಮಾರು 26 ವರ್ಷಗಳೇ ನಡೆದಿರುತ್ತದೆ. ಇದು ಕೂಡ ಒಂದು ಚರಿತ್ರೆಯೇ ಆಗಿರುತ್ತದೆ.

ಒಂದು ಕಾಲದಲ್ಲಿ ಮೈಸೂರು ರಾಜ ಸಂಸ್ಥಾನವೂ ಆರ್ಥಿಕ ಹಾಗೂ ಸಾಮಾಜಿಕವಾಗಿಯೂ ಹಿಂದುಳಿದಿತ್ತು. ಅದು ಇದೇ ಕಾಲಸಂದರ್ಭದಲ್ಲಿ ತನ್ನ ಪ್ರಗತಿಯ ಪಥದಲ್ಲಿ ಸಾಗಲು ಆರಂಭಿಸಿರುತ್ತದೆ. ಅದಕ್ಕೆ ಕಾರಣ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರೇ ಆಗಿದ್ದರು. ಭಾರತದ ಏಳು ಪವಿತ್ರ ನದಿಗಳಲ್ಲಿ ಕನ್ನಡನಾಡಿನ ಜೀವ ಜಲಧಾರೆಯಾಗಿರುವಂಥ ಕಾವೇರಿ ನದಿಯೂ ಕೂಡ ಪ್ರಮುಖವಾಗಿದೆ. ಈ ಕಾವೇರಿ ನದಿಗೆ ಅಣೆಕಟ್ಟೆಯನ್ನು ನಿರ್ಮಿಸುವ ಯೋಜನೆಗೆ ಮಹಾರಾಜ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಒಪ್ಪಿಗೆ ಸಹಿತ ರಾಜಮುದ್ರೆಯನ್ನು 12ನೇ ಅಕ್ಟೋಬರ್ 1911ರಲ್ಲಿ ಹಾಕಿದರು. ಅಂದು ಭಾರತ ದೇಶದಲ್ಲಿ ಅತ್ಯಂತ ಬೃಹತ್ ನೀರಾವರಿ ಯೋಜನೆ ಎಂದರೆ ಅದುವೇ ಈ ಕನ್ನಂಬಾಡಿ ಜಲಾಶಯವನ್ನು ಯೋಜಿಸಿರುವುದೇ ಆಗಿತ್ತು.

ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆಯೊಂದನ್ನು ಕಟ್ಟಿ ಅದರಲ್ಲಿ ಶೇಖರಿಸಲಾಗುವ ನೀರನ್ನು ನೀರಾವರಿಗಾಗಿ ವಿನಿಯೋಗಿಸುವಂಥ ಪ್ರಯತ್ನಗಳು ಈ ನೆಲವನ್ನು ಆಳಿದ ಗಂಗರ ಕಾಲದಿಂದಲೂ ನಡೆದಿರುತ್ತದೆ. ಅಂತೆಯೇ ರಣಧೀರ ಕಂಠೀರವ ನರಸರಾಜರ ಪತ್ನಿ ದೊಡ್ಡಮ್ಮ ಎಂಬುವವರು ತನ್ನಲ್ಲಿದಂಥ ಅಪಾರ ಚಿನ್ನಾಭರಣಗಳನ್ನು ಈ ಯೋಜನೆಗೆ ಕಾಣಿಕೆಯಾಗಿ ನೀಡಿದರು ಎಂಬುದು ಚರಿತ್ರೆಯಲ್ಲಿ ಪ್ರತೀತಿಯಿದೆ. ಈ ಅಣೆಕಟ್ಟೆಯ ನಿರ್ಮಾಣ ಕಟ್ಟೆಯ ಜೀರ್ಣೋದ್ಧಾರವೂ ಟಿಪ್ಪು ಸುಲ್ತಾನ ಕಾಲದಲ್ಲಿ ನಡೆದಿದ್ದ ಬಗೆಗೂ ಕೂಡ ಹಲವು ಶಾಸನಗಳಲ್ಲಿ ಕುರುಹುಗಳು ಲಭ್ಯವಾಗುತ್ತವೆ. ಅಂತಿಮವಾಗಿ ಇಂಥ ಐತಿಹಾಸಿಕ ಪ್ರಯತ್ನಕ್ಕೆ ನಾಂದಿಯಾಡಿದವರು ಮಾತ್ರ ಮೈಸೂರು ನಾಡಿನ ನವನಿರ್ಮಾತೃ ಮಾನವಪ್ರೇಮಿಯಾಗಿದ್ದ ಶ್ರೀನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಅವರು ಎಂಬುದು ಚರಿತ್ರೆಯಲ್ಲಿ ದಾಖಲೆಯನ್ನೇ ಬರೆದಿರುತ್ತದೆ.

ಈ ಅಣೆಕಟ್ಟೆಯ ನಿರ್ಮಾಣದ ಮಹತ್ವಪೂರ್ಣ ಉದ್ದೇಶವೇನೆಂದರೆ; ಕೋಲಾರದ ಚಿನ್ನದ ಗಣಿಗೆ, ಮದ್ರಾಸ್ ಮತ್ತು ಕೊಯಮತ್ತೂರುಗಳಿಗೆ, ಬೆಂಗಳೂರು ಮತ್ತು ಮೈಸೂರು ನಗರಗಳಿಗೆ, ಶಿವನ ಸಮುದ್ರದಿಂದ ಉತ್ಪಾದಿಸುತ್ತಿದ್ದ ವಿದ್ಯುತ್ತನ್ನು ಬಳಸಿಕೊಳ್ಳಲು ಈ ಅಣೆಕಟ್ಟು ಅತ್ಯಂತ ಅವಶ್ಯಕ ಹಾಗೂ ಹೆಚ್ಚು ಹೆಚ್ಚು ಅನುಕೂಲಕರವೇ ಆಗಿರುತ್ತದೆ. ಈ ಕಾರಣ ಮತ್ತು ಪರಿಣಾಮದಿಂದಾಗಿಯೇ ಕಾವೇರಿ ನದಿಯ ನೀರು ಬೇಸಿಗೆಯಲ್ಲಿ ಕಡಿಮೆಯಾದಾಗ ವಿದ್ಯುತ್ ಉತ್ಪಾದನೆಗೆ ತೊಂದರೆಯಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಈ ನೀರನ್ನು ಒಂದು ಕಡೆ ಶೇಖರಿಸಿಟ್ಟುಕೊಂಡು ಬೇಸಿಗೆಯಲ್ಲಿ ನಿಗಧಿತ ಪ್ರಮಾಣದ ನೀರನ್ನು ಶಿವನಸಮುದ್ರಕ್ಕೆ ಸರಬರಾಜು ಮಾಡಿ, ಆ ಮುಖೇನ ವಿದ್ಯುತ್ ಬೇಡಿಕೆಯನ್ನು ಪೂರೈಸಬೇಕಾಗಿತ್ತು. ಹಾಗೆಯೇ ಕೋಲಾರದಲ್ಲಿರುವಂಥ ಚಿನ್ನದ ಗಣಿಗೆ ವಿದ್ಯುತ್ ಅವಶ್ಯಕತೆಯನ್ನು ಪೂರೈಸಲು ಒಂದು ಚಿಕ್ಕ ಚೆಕ್‌ಡ್ಯಾಮ್‌ನ ಮೂಲಕ ತಾತ್ಕಾಲಿಕ ಪರಿಹಾರವನ್ನು ಮಾಡಲಾಗುತ್ತಿತ್ತು. ಆದ್ದರಿಂದಲೇ ಇದಕ್ಕೊಂದು ಸುಸ್ಥಿರ ಮತ್ತು ಶಾಶ್ವತವಾದಂಥ ಪರಿಹಾರವನ್ನು ನೀಡುವ ಸಲುವಾಗಿಯೇ ಕನ್ನಂಬಾಡಿಯ ಮಹತ್ವದ ಯೋಜನೆಯೂ ರೂಪುಗೊಂಡಿರುತ್ತದೆ ಎಂದೇ ಹೇಳಬಹುದು. ಮತ್ತೇ ಬರಗಾಲಕ್ಕೆ ಇಡಾಗುತ್ತಿದ್ದಂಥ ಮಂಡ್ಯ, ಮಳವಳ್ಳಿ, ನಾಗಮಂಗಲ ಹಾಗೂ ಟಿ. ನರಸೀಪುರಗಳಿಗೆ ಈ ಮುಖೇನವಾಗಿಯೇ ಶಾಶ್ವತವಾದಂಥ ನೀರಾವರಿ ಸೌಕರ್ಯವೊಂದನ್ನು ಒದಗಿಸಿಕೊಡುವುದಕ್ಕೆ ಈ ಅಣೆಕಟ್ಟೆಯ ನಿರ್ಮಾಣದ ಪ್ರಧಾನ ಉದ್ದೇಶವೇ ಆಗಿರುತ್ತದೆ.

ಕೃಷ್ಣರಾಜ ಸಾಗರ ಅಣೆಕಟ್ಟೆಯ ನೀಲಿನಕ್ಷೆಯೂ 1906ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಅಭಿಯಂತರಾಗಿದ್ದಂಥ ಮಾಕ್ಸ್ ಹಚಿನ್ ಅವರಿಂದ ರೂಪಿತಗೊಂಡಿತು. ಇವರು ಈ ಯೋಜನೆಯನ್ನು ಸರಿಕ್ರಮದಲ್ಲಿ ಯೋಜಿತವಾಗಿ ರೂಪಿಸುವ ಮಹತ್ವದ ಹೊಣೆಗಾರಿಕೆಯ ಹೊತ್ತು ಅದಕ್ಕಾಗಿ ಸಮೀಕ್ಷಾ ಅಧ್ಯಯನವನ್ನು ನಡೆಸಿದ್ದರು. ಈ ಸಮೀಕ್ಷೆಯನ್ನು ನಡೆಸಿರುವ ಕಾಲಸಂದರ್ಭದಲ್ಲಿ ಕಾವೇರಿ ನದಿಗೆ ಕನ್ನಂಬಾಡಿ ಬಳಿ ಎಡ ಭಾಗದಿಂದ ಹೇಮಾವತಿ ಮತ್ತು ಬಲಭಾಗಳಿಂದ ಲಕ್ಷ್ಮಣ ನದಿಗಳು ಕೂಡುತ್ತಿದ್ದು, ಈ ಸ್ಥಳವೂ ಜಲಾಶಯದ ನಿರ್ಮಾಣಕ್ಕೆ ಯೋಗ್ಯಸ್ಥಳ ಮತ್ತು ಅತ್ಯಂತ ಪ್ರಶಸ್ತವೆಂಬುದನ್ನು ಮನಗಂಡಿದ್ದರು. ಈ ಜಲಾಶಯದಿಂದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವಂಥ ಮಹತ್ವದ ಉದ್ದೇಶವೂ ಕೂಡ ಇದ್ದಿತು. ಆದರೆ, ಈ ಯೋಜನೆಯೂ ಸರ್ಕಾರಕ್ಕೆ ಅಷ್ಟೇನೂ ತೃಪ್ತಿಕರವಾಗದೇ ಕಾರ್ಯಗತವಾಗಲಿಲ್ಲ. ಆದರೂ 1909ರಲ್ಲಿ ಮೈಸೂರು ಸಂಸ್ಥಾನಕ್ಕೆ ಮುಖ್ಯ ಅಭಿಯಂತರರಾಗಿ ಅಧಿಕಾರವನ್ನು ವಹಿಸಿಕೊಂಡಂಥ ಸರ್.ಎಂ. ವಿಶ್ವೇಶ್ವರಯ್ಯ ಅವರು ಸಂಸ್ಥಾನದಲ್ಲಿನ ನೀರಾವರಿಯ ಪ್ರಸ್ತುತತೆಯನ್ನು ಹಾಗೂ ಅದಕ್ಕಾಗಿ ಕೈಗೊಳ್ಳಬೇಕಾದಂಥ ಕ್ರಮಗಳ ಬಗೆಗೆ ಸನ್ನಿಧಾನದ ಗಮನವನ್ನು ಪ್ರಮುಖವಾಗಿ ಸೆಳೆದರು.

ಆದ್ದರಿಂದಲೇ, 1910ರಲ್ಲಿ ಈ ಕನ್ನಂಬಾಡಿ ಜಲಾಶಯ ನಿರ್ಮಾಣಕ್ಕೊಂದು ಪರಿಷ್ಕೃತ ಯೋಜನೆ ಮತ್ತು ವಿನ್ಯಾಸವನ್ನು ರಚಿಸುವ ಕಾರ್ಯವನ್ನು ಸನ್ನಿಧಾನವೂ ಈ ಸರ್.ಎಂ. ವಿಶ್ವೇಶ್ವರಯ್ಯ ಅವರಿಗೆ ವಹಿಸಿ ಆಜ್ಞೆಯನ್ನು ನೀಡಿತು. ಅದರಂತೆಯೇ ಮುಖ್ಯ ಅಭಿಯಂತರರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ ಅವರು ಕಾರ್ಯಪ್ರವೃತ್ತರಾದರು.

ಮೈಸೂರು ರಾಜ ಸಂಸ್ಥಾನವೂ ಈ ಯೋಜನೆಯ ಮುಖೇನ ಕಾವೇರಿ ಕಣಿವೆಯಲ್ಲಿ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗಾಗಿ ಒಂದು ಜಲಾಶಯ ಇಂದಲ್ಲ ನಾಳೆ ಅಗತ್ಯವೆಂಬುದನ್ನು ಗ್ರಹಿಸಿದ್ದು ಅದಕ್ಕಾಗಿ ಮತ್ತು ಅದರ ಸಹಾಯಕ ಕಾಮಗಾರಿಗಳಿಗಾಗಿ ಸಾಧ್ಯವಾದಷ್ಟು ಬೇಗ ಸಮಗ್ರವಾದ ಮತ್ತು ಸವಿವರವಾದ ಯೋಜನೆಯೊಂದನ್ನು ಮುಖ್ಯ ಅಭಿಯಂತರರು ಸಲ್ಲಿಸಿರುವಂಥ ವೆಚ್ಚಗಳು ಅಂದಾಜು ಸಿಬ್ಬಂದಿ ವೆಚ್ಚಕ್ಕಾಗಿ 25,000 ರೂಪಾಯಿಗಳನ್ನು ಮತ್ತು ವಾಸ್ತವ ಸಮೀಕ್ಷೆ ವೆಚ್ಚಕ್ಕಾಗಿ ರೂ. 10,000 ಗಳನ್ನು ಮಂಜೂರು ಮಾಡಿರುತ್ತದೆ. ಈಗಾಗಲೇ ಸರ್. ಎಂ. ವಿಶ್ವೇಶ್ವರಯ್ಯ ಅವರು ಪೂನಾ ಮತ್ತು ಹೈದರಾಬಾದ್‌ಗಳಲ್ಲಿ ಜಲಾಶಯ ಯೋಜನೆಗಳನ್ನು ರೂಪಿಸಿದವರು. ಮತ್ತೇ ಈಜಿಪ್ಟ್ ಹಾಗೂ ಅಮೇರಿಕಾ ದೇಶದಲ್ಲಿನ ಬೃಹತ್ ಜಲಾಶಯಗಳನ್ನು ಪ್ರತ್ಯೇಕ್ಷದರ್ಶಿಯಾಗಿ ನೋಡಿದವರು. ಆದ್ದರಿಂದಲೇ, ಕನ್ನಂಬಾಡಿಯ ಯೋಜನೆಯನ್ನು ರೂಪಿಸಲು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ಕಡಿಮೆ ಅವಧಿಯಲ್ಲಿ ಯೋಜನೆಯನ್ನು ರೂಪಿಸಿ ಸನ್ನಿಧಾನಕ್ಕೆ ಸಲ್ಲಿಸಿದರು.

ಮೈಸೂರು ಸಂಸ್ಥಾನದಲ್ಲಿ ಈ ಹಿಂದೆ ಮುಖ್ಯ ಅಭಿಯಂತರರಾಗಿದ್ದಂಥ ಮ್ಯಾಕ್ ಹಚಿನ್ ಅವರು ಬ್ರಿಟಿಷ್ ಸರ್ಕಾರದ ಅನುಮತಿಯಂತೆಯೇ 80 ಅಡಿ ಎತ್ತರದ ಅಣೆಕಟ್ಟೆಗೆ ಯೋಜನೆಯನ್ನು ರೂಪಿಸಿದ್ದರು. ಆದರೆ ಸರ್.ಎಂ. ವಿಶ್ವೇಶ್ವರಯ್ಯ ಅವರು ಇದಕ್ಕೆ ಬದಲಿಗೆ 130 ಅಡಿಗಳ ಎತ್ತರದ ಮತ್ತು 8600 ಅಡಿಗಳ ಉದ್ದದ ಕಟ್ಟನ್ನು ನಿರ್ಮಾಣ ಮಾಡಲು ಯೋಜನೆ ಸಿದ್ಧಪಡಿಸಿದರು. ಇದರಲ್ಲಿ ಸಂಗ್ರಹವಾಗುವಂಥ ಜಲದಿಂದ ಒಂದೂವರೆ ಲಕ್ಷ ಎಕರೆಗಳಿಗೆ ನೀರು ಒದಗಿಸುವುದಲ್ಲದೇ ಈ ಜಲಾಶಯದ ಮತ್ತು ನಾಲೆಗಳ ನಿರ್ಮಾಣದ ಒಟ್ಟು ವೆಚ್ಚ 253 ಲಕ್ಷ ರೂಪಾಯಿಗಳಾಗಿದ್ದು 81 ಲಕ್ಷ ರೂಪಾಯಿಗಳನ್ನು ಜಲಾಶಯಕ್ಕೆ ಅಂದಾಜು ಮಾಡಲಾಗಿತ್ತು. ಈ ಮೊತ್ತ ಅಂದಿನ ರಾಜ್ಯದ ವಾರ್ಷಿಕ ಆದಾಯಕ್ಕಿಂತಲೂ ಹೆಚ್ಚಿನದೇ ಆಗಿತ್ತು. ಈ ಯೋಜನೆಯನ್ನು 1911ರ ಮೇ 05 ರಂದು ಸರ್.ಎಂ. ವಿಶ್ವೇಶ್ವರಯ್ಯ ಅವರು ಸನ್ನಿಧಾನಕ್ಕೆ ಸಲ್ಲಿಸಿದರು. ಈ ಯೋಜನೆಯ ಔಚಿತ್ಯದ ಬಗೆಗೆ ಯಾರಿಗೂ ಕೂಡ ಸಂದೇಶವಿರಲಿಲ್ಲ. ಆದರೆ, ಈ ಬೃಹತ್ ಯೋಜನೆಯನ್ನು ಇಡಿಯಾಗಿ ಕಾರ್ಯಗತಗೊಳಿಸುವ ಬಗೆಗೆ ಸರ್ಕಾರದ ಕೆಲವು ಉನ್ನತ ಅಧಿಕಾರಿಗಳು ಅದರಲ್ಲೂ ಪ್ರಧಾನವಾಗಿ ಹಣಕಾಸು ಅಧಿಕಾರಿಗಳು ಮಹಾರಾಜರಲ್ಲಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಂಸ್ಥಾನದಲ್ಲಿನ ಹಣಕಾಸು ಅಧಿಕಾರಿಗಳ ಭಿನಾಭಿಪ್ರಾಯಕ್ಕೆ ಪ್ರಧಾನ ಕಾರಣಗಳೆಂದರೆ; ಯೋಜನೆಯ ವೆಚ್ಚವು ರಾಜ್ಯದ ವಾರ್ಷಿಕ ವರಮಾನಕ್ಕಿಂತಲೂ ಅಧಿಕವಾಗಿದದ್ದು. ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆಯ ಈ ಯೋಜನೆಯಿಂದ ನಿರೀಕ್ಷಿತ ಫಲ ಬರುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ಕಡಿತಗೊಳಿಸಿ ಜಾರಿಗೆ ತರಬೇಕು ಎಂದು ಅಭಿಪ್ರಾಯಿಸಿದ್ದರು. ಈ ಸಂದರ್ಭದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಅವರು ನೀರಾವರಿಗಾಗಿ ಮಾಡುವ ವೆಚ್ಚ ಒಂದು ಪ್ರದೇಶದ ಜೀವನ ಸ್ಥಿತಿಯನ್ನು ಮೇಲೆತ್ತುವ ಕಾರ್ಯಕ್ಕೆ ಮಾಡುವ ವೆಚ್ಚವೆಂದು ಪ್ರತಿಪಾದಿಸಿದರು.

ನೀರಾವರಿ ಯೋಜನೆಯೂ ಕೇವಲ ಭೂಮಿಯುಳ್ಳವರಿಗೆ ಮಾತ್ರ ಪ್ರಯೋಜನಕಾರಿಯಲ್ಲ; ಅದರಿಂದ ವ್ಯವಸಾಯ ಸಂಬಂಧಿತ ಚಟುವಟಿಕೆಗಳು ಹೆಚ್ಚುತ್ತದೆ. ವ್ಯವಸಾಯೋಪಕರಣೆಗಳು. ಕ್ರಿಮಿನಾಶಕ ಗೊಬ್ಬರ ಇವುಗಳು ಉತ್ಪಾದನೆಗೆ ಬೇಡಿಕೆ ಹೆಚ್ಚುತ್ತದೆ. ವ್ಯವಸಾಯಕ್ಕೆ ಸಂಬಂಧಿಸಿದ ಉಪಕೈಗಾರಿಕೆಗಳು ಬೆಳೆಯುತ್ತವೆ, ಆಹಾರ ಉತ್ಪಾದನೆಯಿಂದ ರಾಷ್ಟ್ರೀಯ ವರಮಾನ ಹೆಚ್ಚುತ್ತದೆ. ರಾಜ್ಯಕ್ಕೆ ಪ್ರತ್ಯೇಕ್ಷ–ಪರೋಕ್ಷ ತೆರಿಗೆಯಿಂದ ಆದಾಯ ಬರುತ್ತದೆ ಎಂದು ನೀರಾವರಿಗಾಗಿ ಮಾಡುವ ವೆಚ್ಚವನ್ನು ಸಮರ್ಥಿಸಿದರು. ಇದರ ಜೊತೆಗೆಯೇ ಈ ಯೋಜನೆ ಅಂಗೀಕೃತವಾಗದಿದ್ದಲ್ಲಿ ತಾನು ಸೇವೆಯಲ್ಲಿ ಮುಂದುವರಿಯಲು ಉತ್ಸುಕವಾಗಿಲ್ಲವೆಂದು ತಿಳಿಸಿದರು. ಹೀಗಾಗಿ ಮಹಾರಾಜರು ಯೋಜನೆಯ ಪ್ರತಿಯೊಂದು ವಿವರವನ್ನು ತಿಳಿದು ತೃಪ್ತಿ ವ್ಯಕ್ತಪಡಿಸಿದರು ಮತ್ತು ಯಾವುದೇ ಬದಲಾವಣೆಗಳಿಲ್ಲದೆ ಯೋಜನೆಯನ್ನು ಮಂಜೂರು ಮಾಡಿದರು. ಈ ಸಂದರ್ಭದಲ್ಲಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ರಾಜಮಾತೆ ಅವರು ತೆಗೆದುಕೊಂಡಂಥ ತೀರ್ಮಾನವೂ ಕೂಡ ಅಪರೂಪವಾದದ್ದು. ಹಾಗೆಯೇ ಅಪೂರ್ವವಾದದ್ದು ಕೂಡ ಎಂದೇ ಹೇಳಬಹುದು. ಅರಮನೆಯ ರಾಜರ ಖಾಸಗೀ ಭಂಡಾರದಲ್ಲಿದಂಥ ನಾಲ್ಕು ಭಾರಿ ಮೂಟೆಗಳ ವಜ್ರ–ವೈಢೂರ್ಯಗಳ ಆಭರಣಗಳು ಮತ್ತು ಬೆಳ್ಳಿ ರೂಪಾಯಿಗಳನ್ನು ಮುಂಬಾಯಿಗೆ ತೆಗೆದುಕೊಂಡು ಅಲ್ಲಿ ಮಾರಾಟ ಮಾಡಿ, ಆ ಹಣವನ್ನು ಕನ್ನಂಬಾಡಿ ಕಟ್ಟೆಗೆ ವಿನಿಯೋಗಿಸಲಾಗಿರುತ್ತದೆ. ಹೀಗೆ, ಒಬ್ಬ ಜವಾಬ್ದಾರಿಯುತ ಮಹಾರಾಜ ತನ್ನ ನಾಡಿನ ಪ್ರಗತಿಪರ ಕಾರ್ಯಗಳಿಗೆ ನೀಡಿದ ಮೌಲ್ಯಯುತ ವೈಯಕ್ತಿಕ ಬೆಂಬಲವಿದು ಎಂದೇ ಹೇಳಬಹುದು.

ಈ ಎಲ್ಲಾ ಪ್ರಯತ್ನಗಳ ನೆಲೆಯಲ್ಲಿ 1911ರಲ್ಲಿ ಆರಂಭಗೊಂಡಿರುವಂಥ ಈ ಯೋಜನೆಯು ಸರ್ಕಾರವು ಹಂತ–ಹಂತವಾಗಿ ನೀಡುತ್ತಿದ್ದ ಹಣಕಾಸಿನ ಅನುದಾನದಿಂದ 1932ರಲ್ಲಿ ಮುಕ್ತಾಯಗೊಂಡಿತು. ರಾಜ್ಯದ ಸರ್ವತೋಮುಖ ವೃದ್ಧಿಗಾಗಿ ನಿರ್ಮಾಣಗೊಂಡ ಈ ಜಲಾಶಯದ ನಿರ್ಮಾಣ ಕಾರ್ಯದಲ್ಲಿ ಸರಿಸುಮಾರು ಎಂಟಕ್ಕೂ ಹೆಚ್ಚು ಮುಖ್ಯ ಅಭಿಯಂತರರೂ ಹಾಗೂ ಪ್ರಗತಿಪರ ದಿವಾನರು, ಹಾಗೆಯೇ ಅಸಂಖ್ಯಾತ ಕಾರ್ಮಿಕ ವರ್ಗದವರ ನಿರಂತರ ಪರಿಶ್ರಮವಿತ್ತು ಎಂದೇ ಹೇಳಬಹುದು. 1917ರಲ್ಲಿ ಕನ್ನಂಬಾಡಿ ಜಲಾಶಯಕ್ಕೆ ಮಹಾರಾಜರ ಹೆಸರಿನಲ್ಲಿ ಕೃಷ್ಣರಾಜ ಸಾಗರ ಎಂದು ನಾಮಕರಣ ಮಾಡುವ ಮೂಲಕ ಈ ಮಹತ್ವದ ಕಾರ್ಯದ ಮೂಲ ಸೂತ್ರಧಾರಿಗೆ ಗೌರವವನ್ನು ಸಲ್ಲಿಸಲಾಯಿತು.

ಅಖಿಲ ಭಾರತದ ಮಟ್ಟದಲ್ಲಿ ಅತ್ಯಂತ ಬೃಹತ್ ನೀರಾವರಿ ಯೋಜನೆ ಎನಿಸಿದ್ದ ಈ ಕನ್ನಂಬಾಡಿ ಜಲಾಶಯವೂ ಒಟ್ಟು 48,335 ಮಿಲಿಯನ್ ಘನ ಅಡಿ ನೀರನ್ನು ಶೇಖರಿಸಿರುತ್ತದೆ. ಜಲಾಶಯದ ಒಟ್ಟು ಜಲಾನಯನ ಭೂ ಪ್ರದೇಶವೂ 10,619 ಚದರ ಕಿ.ಮೀ, ಜಲಾಶಯದ ನೀರು 50 ಚದರ ಮೈಲಿಯಷ್ಟು ಹರಡಿರುತ್ತದೆ. ಈ ಜಲಾಶಯದಿಂದಾಗಿ 1939ರಲ್ಲಿ 48 ಸಾವಿರ ಎಕರೆ ಭೂ ಪ್ರದೇಶಕ್ಕೆ ಈ ಯೋಜನೆಯಿಂದಾಗಿಯೇ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿತ್ತು. 1940ರ ವೇಳೆಗೆ ಸರಿಸುಮಾರು 70,230 ಎಕರೆ ಭೂ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಯಿತು. ಈ ಜಲಾಶಯದ ನಿರ್ಮಾಣದಿಂದ 9520 ಎಕರೆ ತರಿಭೂಮಿ ಮತ್ತು 13,929 ಎಕರೆ ಖುಷ್ಕಿ ಭೂಮಿಯು ಮುಳುಗಡೆಯಾಗಿದ್ದು, 25 ಗ್ರಾಮಗಳ ಸುಮಾರು 15000 ಜನರಿಗೆ ಪುನರ್ ವಸತಿಯನ್ನು ಕಲ್ಪಿಸಲಾಗಿದೆ. ಹೀಗೆ, ಸಂಸ್ಥಾನದ ನೀರಾವರಿ ವ್ಯವಸ್ಥೆಯ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲಾವಧಿಯಲ್ಲಿ ಉತ್ತಮ ಚೌಕಟ್ಟನ್ನು ಪಡೆದುಕೊಂಡಿತು. ಇಂಥ ಪ್ರದೇಶಗಳಲ್ಲಿನ ನೀರಿನ ಸಂಗ್ರಹಣೆ ಅತಿ ಸಮಂಜಸವಾಗಿದ್ದು, ಮಳೆಗಾಲದಲ್ಲಿ ಹರಿದು ಸಮುದ್ರ ಸೇರಿ ವ್ಯರ್ಥವಾಗುತ್ತಿದ್ದ ಪ್ರತಿ ಹನಿ

ನೀರನ್ನು ಲಾಭದಾಯಕವಾಗಿ ಸಂಗ್ರಹಿಸಲಾಗಿದೆ.

ಹೀಗೆ, ನೀರಾವರಿ ಹಾಗೂ ಕುಡಿಯುವ ನೀರನ್ನು ಒದಗಿಸುವುದು ಇವುಗಳ ಪ್ರಮುಖ ಉದ್ದೇಶಗಳು ಹಾಗೂ ವಿಷಯದಲ್ಲಿ ಕೆರೆ, ನದಿ, ಜಲಾಶಯಗಳ ಪಾತ್ರವು ಅತ್ಯಂತ ಗಣನೀಯವಾದುದ್ದೆಂಬುದು ಪ್ರತಿಯೊಬ್ಬರಿಗೂ ತಿಳಿದಿರುವ ಸಂಗತಿಯೇ ಆಗಿರುತ್ತದೆ. ಇದರ ಜೊತೆಯೇ ಇಂಥದೊಂದು ನೀರಾವರಿ ಸೌಲಭ್ಯಗಳು ಕೂಡ ಇತರ ಅವಶ್ಯಕ ಸೇವೆಗಳನ್ನು ಮಾಡುತ್ತಿವೆ. ಅವುಗಳೆಂದರೆ; ಪ್ರವಾಹ ನಿಯಂತ್ರಣ, ಬಂದ ಹತೋಟಿ, ಭೂಮಿಯೊಳಗಿನ ನೀರಿನ ಹೆಚ್ಚಳ ಮೀನುಗಾರಿಕೆಗೆ ನೆರವು ಹಾಗೂ ಕೊನೆಯದಾಗಿ ಪರಿಸರದ ಅಂದ–ಚೆಂದ ಮತ್ತು ಶುಚಿತ್ವವನ್ನು ಕಾಪಾಡುವುದು, ಪ್ರವಾಸಿಗರ ಮನಸ್ಸಿಗೆ ಮೃದವನ್ನು ನೀಡುವುದು. ಈ ಎಲ್ಲಾ ಘನೀಭೂತ ಅಂಶಗಳು ಮೈಸೂರು ಸಂಸ್ಥಾನದಲ್ಲಿನ ನೀರಾವರಿಯ ಚೌಕಟ್ಟಿನಲ್ಲಿ ಮಿಳತವೇ ಆಗಿರುತ್ತವೆ. ಈ ಮಿಳಿತಗಳಿಗೆ ಶಕ್ತಿ ಆಗಿರುವುದು ಮಾತ್ರ ಮೈಸೂರು ಸಂಸ್ಥಾನದ ಮಾನವೀಯ ಮೌಲ್ಯವುಳ್ಳ ಘನಿಯೇ ಆಗಿದ್ದಂಥ ಜೀವ ಜಲಧಾರೆಯನ್ನು ನಾಡಿಗೆ ನೀಡಿದ ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡಯರೇ ಆಗಿದ್ದಾರೆ ಎಂದು ಹೇಳಬಹುದು.

**ಆಧಾರ ಗ್ರಂಥಗಳು**


1. ಸುರೇಶ. ಎ. ಎನ್, ಮೈಸೂರು ಸಂಸ್ಥಾನದಲ್ಲಿ ರಚನಾತ್ಮಕ ಕಾರ್ಯಕ್ರಮಗಳು, ರಚನ ಪ್ರಕಾಶನ, ಮೈಸೂರು, 2011
2. ಸದಾಶಿವ. ಕೆ, ಮೈಸೂರು ರಾಜ್ಯದ ಸಾಮಾಜಿಕ ಕಾನೂನುಗಳ ಇತಿಹಾಸ – 1881–1948, ಚೇತನ ಬುಕ್ ಹೌಸ್, ಮೈಸೂರು, 1996
3. ನಂಜರಾಜ ಅರಸು. ಪಿ.ವಿ. ಮತ್ತು ಚಂದ್ರರಾಜ ಅರಸು. ಎಸ್. ಆರ್, (ಸಂ), ನಾಲ್ವಡಿ ಕೃಷ್ಣರಾಜ ಒಡೆಯರ ಒಂದು ದರ್ಶನ, ಭೂಮಿ ಪ್ರಕಾಶನ, ಮೈಸೂರು, 1996
4. ನಾಗರಾಜು. ಎಸ್, ಪ್ರಗತಿಪಥ, ಜ್ಯೋತಿ ಪ್ರಕಾಶನ, ಮೈಸೂರು, 2011
5. ಶಾಮರಾವ್. ಎಂ, ಮೈಸೂರು ಸಂಸ್ಥಾನದ ಚರಿತ್ರಸಾರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು, 1906
6. ವೀರತಪ್ಪ. ಕೆ, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ವಿಜಯರವಿ ಪ್ರಕಾಶನ, ಬೆಂಗಳೂರು, 1977
7. ಬಂಗಾರಪ್ಪ. ಈ, ವಿಚಾರಕ್ರಾಂತಿಯ ದಕ್ಷಿಣದ ಧೃವತಾರೆಗಳು, ಚಿಂತನ ಪ್ರಕಾಶನ, ಮೈಸೂರು, 2011
8. ಅನಿತಾ. ಎಂ.ಎಸ್, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ಪ್ರಕಟಣಾ ಸಮಿತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2016
9. ರಾಚಪ್ಪಾಜಿ. ಎಂ, ಸುಖೀರಾಜ್ಯ ನಿರ್ಮಾಣದ ಚಿಂತನೆಗಳು, ಉನ್ನತಿ ಪ್ರಕಾಶನ, ಮೈಸೂರು, 2020
10. ಚಂದ್ರಶೇಖರ್. ಎಸ್. ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು – 1881–1940, ಅಂಕಣ ಪ್ರಕಾಶನ, ಬೆಂಗಳೂರು, 1950